ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 30-03-1998.

# *ಸರ್ವ ಪ್ರಾಪ್ತಿಗಳ ಸ್ಮೃತಿಯನ್ನು ಪ್ರತ್ಯಕ್ಷ ಮಾಡಿಕೊಂಡು, ಅಚಲ ಸ್ಥಿತಿಯ ಅನುಭವ ಮಾಡಿ ಹಾಗೂ ಜೀವನ್ಮುಕ್ತರಾಗಿ.*

(सर्व प्राप्तियों की स्मृति इमर्ज कर अचल स्थिति का अनुभव करो और जीवन्मुक्त बनो)

ಇಂದು ಭಾಗ್ಯವಿಧಾತ ತಂದೆ ತನ್ನ ವಿಶ್ವದ ಸರ್ವ ಶ್ರೇಷ್ಠ ಭಾಗ್ಯವಂತ ಮಕ್ಕಳನ್ನು ನೋಡುತ್ತಿದ್ದಾರೆ. ತಂದೆಯ ಮಹಿಮೆಯನ್ನು ಆತ್ಮರು ಹಾಡುತ್ತಾರೆ ಆದರೆ ಮಕ್ಕಳಾದ ನಿಮ್ಮ ಮಹಿಮೆಯನ್ನು ಸ್ವಯಂ ತಂದೆ ಹಾಡುತ್ತಾರೆ. ಇಷ್ಟು ಶ್ರೇಷ್ಠ ಭಾಗ್ಯ ತಯಾರಾಗಿದೆ ಹಾಗು ತಯಾರಾಗಿಯೇ ಇತ್ತು ಎಂದು ಎಂದಾದರೂ ಸ್ವಪ್ನದಲ್ಲಾದರೂ ಯೋಚಿಸಿದ್ದೀರಾ, ಪ್ರಪಂಚದ ಜನರು ಹೇಳುತ್ತಾರೆ- ಭಗವಂತ ನಮ್ಮನ್ನು ರಚಿಸಿದರು ಎಂದು ಆದರೆ ಅವರಿಗೆ ಭಗವಂತನ ಪರಿಚಯವೂ ಇಲ್ಲ, ರಚನೆಯ ಪರಿಚಯವೂ ಇಲ್ಲ. ನೀವು ಪ್ರತಿಯೊಬ್ಬ ಭಾಗ್ಯವಂತ ಮಕ್ಕಳು ಅನುಭವ ಹಾಗೂ ನಶೆಯಿಂದ ಹೇಳುತ್ತೀರಿ- ನಾವು ಶಿವವಂಶಿ ಬ್ರಹ್ಮಾಕುಮಾರ ಬ್ರಹ್ಮಾಕುಮಾರಿಯರಾಗಿದ್ದೇವೆ. ನಮಗೆ ತಿಳಿದಿದೆ- ನಮ್ಮನ್ನು ಬಾಪ್‌ದಾದಾರವರು ಹೇಗೆ ರಚಿಸಿದ್ದಾರೆ ಎಂದು. ಭಲೆ ಚಿಕ್ಕಮಗುವಾಗಿರಲಿ, ಅಥವಾ ಮುದುಕ ಪಾಂಡವರಾಗಿರಲಿ, ಶಕ್ತಿಯರಾಗಿರಲಿ ಯಾರಾದರೂ ನಿಮ್ಮ ತಂದೆ ಯಾರಾಗಿದ್ದಾರೆ ಎಂದು ಕೇಳಿದರೆ, ಏನು ಹೇಳುವಿರಿ? ನಶೆಯಿಂದ ಹೇಳುತ್ತೀರಿ ಅಲ್ಲವೇ- ನಮ್ಮನ್ನು ಶಿವ ಬಾಬಾರವರು ಬ್ರಹ್ಮಾ ತಂದೆಯ ಮೂಲಕ ರಚಿಸಿದ್ದಾರೆ ಆದ್ದರಿಂದ ನಾವು ಭಗವಂತನ ಮಕ್ಕಳಾಗಿದ್ದೇವೆ, ಭಗವಂತನೊಂದಿಗೆ ಡೈರೆಕ್ಟ್ ಮಿಲನ ಮಾಡುತ್ತೇವೆ, ಪರಮಾತ್ಮ ಅಥವಾ ಭಗವಂತ ಕೇವಲ ನಮ್ಮ ತಂದೆಯಲ್ಲ ಆದರೆ ಅವರು ತಂದೆಯೂ ಆಗಿದ್ದಾರೆ, ಶಿಕ್ಷಕನು ಆಗಿದ್ದಾರೆ ಹಾಗೂ ಸದ್ಗುರುವೂ ಆಗಿದ್ದಾರೆ. ಎಲ್ಲರಿಗೂ ಈ ನಶೆ ಇದೆಯೇ? (ಚಪ್ಪಾಳೆ ಹೊಡೆದರು) ಒಂದು ಕೈಯಿಂದ ಚಪ್ಪಾಳೆ ಹೊಡೆಯಿರಿ- ಈಗ ಈ ವ್ಯಾಯಾಮವನ್ನು ಮುದುಕರಿಗೂ ಕಲಿಸಿ ಕೊಡಬೇಕಾಗಿದೆ. ಮಕ್ಕಳ ಖುಷಿಯನ್ನು ನೋಡಿ ಬಾಪ್‌ದಾದಾರವರು ಸಹ ಖುಷಿಯಲ್ಲಿ ತೂಗುತ್ತಿದ್ದಾರೆ ಹಾಗೂ ಸದಾ ಹೇಳುತ್ತಾರೆ- ವಾಹ್ ನನ್ನ ಪ್ರತಿಯೊಂದು ಶ್ರೇಷ್ಠ ಭಾಗ್ಯವಂತ ವಿಶೇಷ ಆತ್ಮರೇ... ತಂದೆಯ ರೂಪದಲ್ಲಿ ಪರಮಾತ್ಮ ಪಾಲನೆಯ ಅನುಭವ ಮಾಡುತ್ತಿರುವಿರಿ, ಈ ಪರಮಾತ್ಮ ಪಾಲನೆ ಇಡೀ ಕಲ್ಪದಲ್ಲಿ ಕೇವಲ ಈ ಬ್ರಾಹ್ಮಣ ಜನ್ಮದಲ್ಲಿಯೇ ಮಕ್ಕಳಾದ ನಿಮಗೆ ಪ್ರಾಪ್ತಿಯಾಗುತ್ತದೆ, ಈ ಪರಮಾತ್ಮ ಪಾಲನೆಯಲ್ಲಿಯೇ ಆತ್ಮನಿಗೆ ಸರ್ವಪ್ರಾಪ್ತಿ ಸ್ವರೂಪದ ಅನುಭವವಾಗುತ್ತದೆ. ಪರಮಾತ್ಮನ ಪ್ರೀತಿ ಸರ್ವ ಸಂಬಂಧಗಳ ಅನುಭವ ಮಾಡಿಸುತ್ತದೆ. ಪರಮಾತ್ಮನ ಪ್ರೀತಿ ತನ್ನ ದೇಹ ಭಾನವನ್ನು ಮರೆಸುತ್ತದೆ, ಜೊತೆ ಜೊತೆ ಅನೇಕ ವ್ಯರ್ಥಗಳೊಂದಿಗಿನ ಪ್ರೀತಿಯನ್ನು ಮರೆಸುತ್ತದೆ. ಇಂತಹ ಪರಮಾತ್ಮನ ಪ್ರೀತಿ, ಪರಮಾತ್ಮನ ಪಾಲನೆಯಲ್ಲಿ ಬೆಳೆಯುವಂತಹ ಭಾಗ್ಯವಂತ ಆತ್ಮರಾಗಿದ್ದೀರಿ. ನೀವು ಆತ್ಮರು ಎಷ್ಟು ಭಾಗ್ಯವಂತರಾಗಿದ್ದೀರಿ- ಸ್ವಯಂ ತಂದೆ ತನ್ನ ವತನವನ್ನು ಬಿಟ್ಟು ಗಾಡ್ಲಿ ಸ್ಟೂಡೆಂಟ್ಸ್‌ಆದ ನಿಮ್ಮನ್ನು( ಈಶ್ವರಿಯ ವಿದ್ಯಾರ್ಥಿ)

ಓದಿಸಲು ಬರುತ್ತಾರೆ. ಇಂತಹ ಶಿಕ್ಷಕನನ್ನು ನೋಡಿದ್ದೀರಾ, ಪ್ರತಿದಿನ ಮುಂಜಾನೆ ದೂರ ದೇಶದಿಂದ ಓದಿಸಲು ಬರುತ್ತಾರೆ? ಇಂತಹ ಶಿಕ್ಷಕನನ್ನು ಎಂದಾದರೂ ನೋಡಿದ್ದೀರಾ? ಆದರೆ ಮಕ್ಕಳಿಗಾಗಿ ತಂದೆ ಶಿಕ್ಷಕರಾಗಿ ನಿಮ್ಮ ಬಳಿ ಓದಿಸಲು ಬರುತ್ತಾರೆ ಹಾಗೂ ಎಷ್ಟು ಸಹಜವಾಗಿ ಓದಿಸುತ್ತಾರೆ. ಎರಡು ಶಬ್ದಗಳ ವಿದ್ಯೆಯಾಗಿದೆ- ನೀವು ಹಾಗೂ ತಂದೆ, ಇದೇ ಎರಡು ಶಬ್ದಗಳಲ್ಲಿ ಚಕ್ರವಾಗಿರಲಿ, ಡ್ರಾಮಾ ಆಗಿರಲಿ, ಕಲ್ಪವೃಕ್ಷ ವಾಗಿರಲಿ ಎಲ್ಲಾ ಜ್ಞಾನ ಸಮಾವೇಶವಾಗಿದೆ. ಬೇರೆ ವಿದ್ಯೆಗಳಲ್ಲಿ ಬುದ್ಧಿಯ ಮೇಲೆ ಎಷ್ಟು ಹೊರೆ ಬೀಳುತ್ತದೆ ಹಾಗೂ ತಂದೆಯ ವಿದ್ಯೆಯಿಂದ ಬುದ್ಧಿ ಹಗುರವಾಗಿ ಹೋಗುತ್ತದೆ. ಹಗುರತೆಯ ಚಿಹ್ನೆ ಮೇಲೆ ಹಾರುವುದಾಗಿದೆ. ಹಗುರವಾದ ವಸ್ತು ಸ್ವತಹವಾಗಿ ಮೇಲೆ ಇರುತ್ತದೆ. ಹಾಗಾದರೆ ಈ ವಿದ್ಯೆಯಿಂದ ಮನಸ್ಸು- ಬುದ್ಧಿ ಹಾರುವ ಕಲೆಯ ಅನುಭವ ಮಾಡುತ್ತದೆ. ಹಾಗಾದರೆ ಬುದ್ಧಿ ಹಗುರವಾಯಿತಲ್ಲವೇ! ಮೂರು ಲೋಕದ ಜ್ಞಾನ ಸಿಕ್ಕಿಬಿಡುತ್ತದೆ. ಹಾಗಾದರೆ ಇಂತಹ ವಿದ್ಯೆ ಇಡೀ ಕಲ್ಪದಲ್ಲಿ ಯಾರಾದರೂ ಓದಿದ್ದೀರಾ? ಯಾರಾದರೂ ಈ ರೀತಿ ಓದಿಸುವವರು ಸಿಕ್ಕಿದ್ದಾರೆಯೇ? ಹಾಗಾದರೆ ಭಾಗ್ಯವಾಗಿದೆ!

ನಂತರ ಸದ್ಗುರುವಿನ ಮುಖಾಂತರ ಎಂತಹ ಶ್ರೀಮತ ಸಿಗುತ್ತದೆ ಎಂದರೆ ಅದರಿಂದ ಸದಾ ಕಾಲಕ್ಕಾಗಿ ಏನು ಮಾಡಲಿ, ಹೇಗೆ ನಡೆಯಲಿ, ಈ ರೀತಿ ಮಾಡಲೇ ಅಥವಾ ಬೇಡವೇ, ಏನಾಗುವುದು... ಇಂತಹ ಎಲ್ಲಾ ಪ್ರಶ್ನೆಗಳು ಸಮಾಪ್ತಿಯಾಗಿ ಬಿಡುತ್ತದೆ. ಏನು ಮಾಡಲಿ, ಹೇಗೆ ಮಾಡಲಿ, ಹೀಗೆ ಮಾಡಲೇ ಅಥವಾ ಹಾಗೆ ಮಾಡಲೇ... ಈ ಎಲ್ಲಾ ಪ್ರಶ್ನೆಗಳ ಒಂದೇ ಶಬ್ದದ ಉತ್ತರವಾಗಿದೆ- ತಂದೆಯನ್ನು ಅನುಕರಣೆ ಮಾಡಿ(ಫಾಲೋ ಫಾದರ್) , ಸಾಕಾರ ಕರ್ಮದಲ್ಲಿ ಬ್ರಹ್ಮಾ ತಂದೆಯನ್ನು ಅನುಸರಿಸಿ, ನಿರಾಕರಿ ಸ್ಥಿತಿಯಲ್ಲಿ ಆಶರೀರಿ ಆಗುವುದರಲ್ಲಿ ಶಿವ ತಂದೆಯನ್ನು ಅನುಕರಿಸಿ. ಇಬ್ಬರು ತಂದೆ ಹಾಗೂ ಅಣ್ಣನನ್ನು ಅನುಸರಿಸುವುದು ಅರ್ಥಾತ್ ಪ್ರಶ್ನಾರ್ಥಕ ಚಿಹ್ನೆ ಸಮಾಪ್ತಿಯಾಗುವುದು ಶ್ರೀಮತದ ಮೇಲೆ ನಡೆಯುವುದು. ಇದು ಕಷ್ಟವೆನಿಸುತ್ತದೆಯೇ? ಕೇಳುವ ಅವಶ್ಯಕತೆ ಬರುತ್ತದೆಯೇ? ಕಾಪಿ( ನಕಲು) ಮಾಡಬೇಕು, ತಮ್ಮ ಬುದ್ಧಿಯನ್ನು ನಡೆಸಬಾರದು. ತಂದೆಯ ಸಮಾನ ಆಗುವುದು ಎಂದರೆ ಫಾಲೋ ಫಾದರ್ ಮಾಡುವುದು. ಕಷ್ಟವಾಗಿದೆಯೇ ಅಥವಾ ಸಹಜವಾಗಿದೆಯೇ? ಸಹಜವಾಗಿದೆ ಅಲ್ಲವೇ? ಮೂವತ್ತು ವರ್ಷದವರು ಕೈ ಎತ್ತಿ, ಒಳ್ಳೆಯದು 30 ವರ್ಷದಲ್ಲಿ ಪರಿಶ್ರಮ ಎನಿಸಿತೇ ಅಥವಾ ಸಹಜವಾಗಿದೆಯೇ? ಈಗ ನೋಡಿ 30 ವರ್ಷದವರಿಗೂ ಸಹಜ ಎನಿಸುತ್ತದೆ ಎಂದರೆ ನಂತರ ಬಂದಿರುವವರಿಗೆ ಪರಿಶ್ರಮ ಎನಿಸುತ್ತಿದೆಯೇ ಅಥವಾ ಸಹಜವಾಗಿದೆಯೇ? ಸಹಜ ಅಲ್ಲವೇ?( ಸೆಕೆಯ ಕಾರಣ ಎಲ್ಲರ ಕೈಯಲ್ಲಿ ಬಣ್ಣ ಬಣ್ಣದ ಫ್ಯಾನುಗಳಿವೆ. ಎಲ್ಲರೂ ಅದರಿಂದ ಬೀಸಿಕೊಳ್ಳುತ್ತಿದ್ದಾರೆ) ಒಳ್ಳೆಯದು. ಫ್ಯಾನುಗಳ ಹೊಳಪು ಚೆನ್ನಾಗಿ ಅನಿಸುತ್ತಿದೆ ಒಳ್ಳೆಯ ದೃಶ್ಯವಾಗಿದೆ ನವೀನತೆ ಇರಬೇಕಲ್ಲವೇ. ಈ ಗ್ರೂಪಿನವರದ್ದು ಇದು ಸಹ ಒಂದು ನವೀನತೆಯಾಗಿದೆ, ಇದು ಸಹ ಟಿವಿಯಲ್ಲಿ ಬಂದುಬಿಟ್ಟಿತ್ತು. ಒಳ್ಳೆಯದು ಎಲ್ಲರೂ ಓಡಿ ಓಡಿ ಬಂದು ತಲುಪಿಬಿಟ್ಟೀರಿ. ಬಾಪ್‌ದಾದಾರವರು ಸಹ ಸ್ನೇಹದ ಶುಭಾಶಯಗಳು ಕೊಡುತ್ತಾರೆ. ನೋಡಿ, ಬೇರೆ ಯಾರೆಲ್ಲಾ ಹದ್ದಿನ ಗುರುಗಳಿರುತ್ತಾರೆಯೋ ಅವರು ಎಷ್ಟು ವರದಾನವನ್ನು ಕೊಡುತ್ತಾರೆ? ಒಂದು ಅಥವಾ ಹತ್ತು, ಜಾಸ್ತಿ ಕೊಡುವುದಿಲ್ಲ. ಆದರೆ ನಿಮಗೆ ಸದ್ಗುರುವಿನ ಮುಖಾಂತರ ಪ್ರತಿದಿನ ವರದಾನವು ಸಿಗುತ್ತದೆ. ಇಂತಹ ಗುರುವನ್ನು ಎಂದಾದರೂ ನೋಡಿದ್ದೀರಾ? ನೋಡಿಲ್ಲ ಅಲ್ಲವೇ! ನೀವೇ ನೋಡಿದ್ದೀರಿ ಹಾಗು ಕಲ್ಪಕಲ್ಪ ನೋಡಿದ್ದೀರಿ. . ಹಾಗಾದರೆ ಸದಾ ತಮ್ಮ ಭಾಗ್ಯದ ಪ್ರಾಪ್ತಿಗಳನ್ನು ಸಮ್ಮುಖದಲ್ಲಿ ಇಟ್ಟುಕೊಳ್ಳಿ.

ಕೇವಲ ಬುದ್ಧಿಯಲ್ಲಿ ಮರ್ಜ್(ಗುಪ್ತ) ಆಗಿ ಇಟ್ಟುಕೊಳ್ಳಬೇಡಿ. ಯಾವಾಗ ಪ್ರಾಪ್ತಿಗಳ ಪಟ್ಟಿ ಎಮರ್ಜ್(ಪ್ರತ್ಯಕ್ಷ) ಆಗುತ್ತದೆಯೋ ಆಗ ಯಾವುದೇ ಪ್ರಕಾರದ ವಿಘ್ನ ದಾಳಿ ಮಾಡುವುದಿಲ್ಲ. ಅದು ಗುಪ್ತವಾಗಿ ಬಿಡುತ್ತದೆ ಹಾಗೂ ಪ್ರಾಪ್ತಿಗಳು ಪ್ರತ್ಯಕ್ಷ ರೂಪದಲ್ಲಿ ಇರುತ್ತವೆ.

ಬಾಪ್‌ದಾದಾ ಇಂದು ಯಾವುದೇ ಕಾರಣದಿಂದ ಕೆಲವು ಮಕ್ಕಳು ಪರಿಶ್ರಮ ಪಡುತ್ತಾರೆ, ಯುದ್ಧ ಮಾಡುತ್ತಾರೆ, ಯೋಗವನ್ನು ಜೋಡಿಸಲು ಬಯಸುತ್ತಾರೆ ಆದರೆ ಜೋಡಣೆ ಆಗುವುದಿಲ್ಲ, ಆತ್ಮ ಅಭಿಮಾನಿಯ ಬದಲಾಗಿ ದೇಹಾಭಿಮಾನದಲ್ಲಿ ಬಂದುಬಿಟ್ಟರೆ ಬಾಪ್‌ದಾದಾರವರಿಗೆ ಇಷ್ಟವಾಗುವುದಿಲ್ಲ. ಕಾರಣ ಏನಾಗಿದೆ? ತಮ್ಮ ಭಾಗ್ಯದ ಪ್ರಾಪ್ತಿಗಳು ಪ್ರತ್ಯಕ್ಷವಾಗಿ ಇರುವುದಿಲ್ಲ, ಗುಪ್ತವಾಗಿರುತ್ತದೆ. ನಂತರ ಯಾರಾದರೂ ನೆನಪಿಗೆ ತರಿಸಿದಾಗ ಯೋಚಿಸಲು ಶುರುಮಾಡುತ್ತಾರೆ ನಾವಂತೂ ಈ ರೀತಿಯಾಗಿ ಇರಬೇಕಿತ್ತು... ಆದ್ದರಿಂದ ಬಹಳ ಸಹಜ ಪುರುಷಾರ್ಥವಾಗಿದೆ- ಪ್ರಾಪ್ತಿಗಳನ್ನು ಪ್ರತ್ತಕ್ಷವಾಗಿ ಇಟ್ಟುಕೊಳ್ಳಿ . ಎಂದಿನಿಂದ ಬ್ರಾಹ್ಮಣರಾದಿರೋ ಅಂದಿನಿಂದ ತಮ್ಮ ಭಾಗ್ಯವನ್ನು ಸ್ಮೃತಿಯಲ್ಲಿಟ್ಟುಕೊಳ್ಳಿರಿ. ಏರುಪೇರಿನಲ್ಲಿ ಬರಬೇಡಿ, ಅರ್ಜುನರಾಗಿರಿ ಏಕೆಂದರೆ ಇಲ್ಲಿ ಆಬುವಿನಲ್ಲಿ ನೆನಪಾರ್ಥ ಏನಿದೆ? ಅಚಲ್ ಘರ್ ಇದೆಯೇ ಅಥವಾ ಚಂಚಲ್ ಘರ್ ಇದೆಯೇ (ಏರುಪೇರಿನ ಮನೆ)? ಅಚಲ್ ಘರ್ ಇದೆಯಲ್ಲವೇ? ಇದು ಯಾರ ಸ್ಮೃತಿಚಿಹ್ನೆಯಾಗಿದೆ? ನಿಮ್ಮ ಸ್ಮೃತಿಚಿಹ್ನೆಯಾಗಿದೆ ಅಲ್ಲವೇ? ಹಾಗಾದರೆ ಯಾವುದೇ ಸೂಕ್ಷ್ಮ ಪುರುಷಾರ್ಥದ ಮಾರ್ಗ ಕಷ್ಟ ಎನಿಸಿದರೆ, ಬುದ್ಧಿ ಬಹಳ ಏರುಪೇರಿನಲ್ಲಿ ಇದ್ದರೆ, ನಿಮ್ಮ ಸ್ಮೃತಿಚಿಹ್ನೆಯನ್ನು ಸ್ಮೃತಿಯಲ್ಲಿ ತಂದುಕೊಳ್ಳಿರಿ. ಕೆಲವು ಬಾರಿ ಮಕ್ಕಳು ಜ್ಞಾನದ ಪಾಯಿಂಟ್ಗಳನ್ನು ಹೇಳುತ್ತಾರೆ- ನಾನು ಆತ್ಮನಾಗಿದ್ದೇನೆ, ಇದು ಡ್ರಾಮಾ ಆಗಿದೆ, ಇದಂತೂ ವಿಘ್ನವಾಗಿದೆ, ಇದಂತೂ ಸೈಡ್ ಸೀನ್ (ದೃಶ್ಯ) ಆಗಿದೆ ಈ ರೀತಿ ಹೇಳುತ್ತಲೂ ಏರುಪೇರಿನಲ್ಲಿ ಬರುತ್ತಿರುತ್ತಾರೆ. ಏರುಪೇರಿನಲ್ಲಿ ಬರುತ್ತಾ ಈ ರೀತಿ ಬುದ್ಧಿ ಏರುಪೇರಿನಲ್ಲಿ ಬಂದಾಗ ಅಚಲವಾಗಿರಲು ಸಾಧ್ಯವಿಲ್ಲ ಎಂದು ಹೇಳುತ್ತಿರುತ್ತಾರೆ. ಮಧುಬನದ ಅಚಲ್ ಘರ್ ನೆನಪಿನಲ್ಲಿಟ್ಟುಕೊಳ್ಳಿ. ಇದಂತೂ ಸ್ಥೂಲ ವಸ್ತುವಾಗಿದೆ ಅಲ್ಲವೇ! ಸೂಕ್ಷ್ಮವಂತು ಅಲ್ಲ. ಕಣ್ಣುಗಳಿಂದ ನೋಡುವಂತಹ ವಸ್ತುವಾಗಿದೆ. ನಮ್ಮ ಸ್ಮೃತಿಚಿಹ್ನೆ(ನೆನಪಾರ್ಥ) ಅಚಲ್ ಘರ್ ಆಗಿದೆ. ಏರುಪೇರಿನ ಮನೆ ಅಲ್ಲ ಏಕೆಂದರೆ ಬಾಪ್‌ದಾದಾರವರು ಈ ವರ್ಷವನ್ನು ಸರ್ವ ಮಕ್ಕಳ ಪ್ರತಿ ಮುಕ್ತಿ ವರ್ಷವನ್ನಾಗಿ ಆಚರಿಸಲು ಬಯಸುತ್ತಾರೆ. ಕೈಯೆತ್ತಿಸಿದರೆ ಕೆಲವರು ಕೈ ಎತ್ತುವುದು ಕೆಲವರು ಎತ್ತದೇ ಇರುವುದು ಈ ರೀತಿ ಆಗದಿರಲಿ. ಎಲ್ಲರೂ ಖುಷಿ ಖುಷಿಯಿಂದ ಕೈಯಿಂದ ಚಪ್ಪಾಳೆಯನ್ನು ಹೊಡೆಯಿರಿ, (ಎಲ್ಲರೂ ಚಪ್ಪಾಳೆ ಹೊಡೆದರು) ಈಗ ಚಪ್ಪಾಳೆ ಹೊಡೆದಿರಿ ಒಳ್ಳೆಯದು, ಆದರೆ ಇದೇ ರೀತಿ ಬಾಪ್‌ದಾದಾರವರು ಈ ವರ್ಷದ ಸಮಾಪ್ತಿಯಲ್ಲಿ ಇಷ್ಟು ಜೋರಾಗಿ ಚಪ್ಪಾಳೆಯನ್ನು ಬಾರಿಸುತ್ತಿರುವುದನ್ನು ನೋಡಿದರು. ಈಗ ಚಪ್ಪಾಳೆಯನ್ನು ಹೊಡೆದಿರಿ ಒಳ್ಳೆಯದು ಆದರೆ ಆಗ ಕೂಡ ಹೊಡೆಯಬೇಕು. ಹೊಡೆಯುತ್ತಿರಾ? ನೋಡಿ ಕೈಯಿಂದ ಚಪ್ಪಾಳೆಯನ್ನು ಹೊಡೆದು ಖುಷಿ ಪಡಿಸಿದಿರಿ ಆದರೆ ಬಾಪ್‌ದಾದಾ ಹೊಸ ವರ್ಷದಲ್ಲಿ ಜನವರಿಯ 18ನೇ ದಿನದಂದು ವಿಶೇಷ ಬ್ರಹ್ಮಾ ತಂದೆಯು ಶರೀರದಿಂದ ಮುಕ್ತರಾಗುವ ದಿನವಾಗಿದೆ, ಹಾಗಾದರೆ ಜನವರಿ 18ರಂದು ಬಾಪ್‌ದಾದಾರವರು ಮತ್ತೆ ಕೈಯನ್ನು ಎತ್ತಿಸುತ್ತಾರೆ- ಮುಕ್ತಿ ವರ್ಷವನ್ನು ಆಚರಿಸಿದ್ದೀರಾ ಅಥವಾ ಕೇವಲ ಯೋಚಿಸಿದ್ದೀರಾ? ಆಚರಿಸಬೇಕು, ಆಚರಿಸಬೇಕು ಎಂದು ಯೋಚಿಸುವುದರಲ್ಲಿಯೇ ಇಲ್ಲ ತಾನೆ, ಸ್ವರೂಪದಲ್ಲಿ ತಂದಿದ್ದೀರಾ ಅಥವಾ ಯೋಚಿಸುತ್ತಾ

ಯೋಚಿಸುತ್ತಾ ಕೊನೆಯಲ್ಲಿಯೂ ಸಹ ಯೋಚಿಸುತ್ತಲೇ ಉಳಿದುಕೊಂಡು ಬಿಡುತ್ತೀರಾ! ಈ ಫಲಿತಾಂಶವನ್ನು ಬಾಪ್‌ದಾದಾರವರು ನೋಡಲು ಬಯಸುತ್ತಾರೆ. ತೋರಿಸುತ್ತೀರಾ? ಒಳ್ಳೆಯದು. ನೆನಪಿನಲ್ಲಿ ಇರುತ್ತದೆ ಅಲ್ಲವೇ! ಪ್ರಾಪ್ತಿಗಳನ್ನು ಸಮ್ಮುಖದಲ್ಲಿ ಇಟ್ಟುಕೊಳ್ಳಿ. ತಂದೆಯ ನೆನಪಿನ ಜೊತೆ, ತಂದೆ ಏನೆಲ್ಲವನ್ನು ಕೊಟ್ಟಿದ್ದಾರೆಯೋ ಅದನ್ನು ಸಹ ಪ್ರತ್ಯಕ್ಷ ಮಾಡಿಕೊಳ್ಳಿರಿ- ಏನನ್ನಾಗಿ ಮಾಡಿದರು, ಹಾಗೂ ಏನು ಸಿಕ್ಕಿತು!

ಬಾಪ್‌ದಾದಾರವರು ಈ ವರ್ಷದ ನಂತರ ಪ್ರತಿ ಮಗುವನ್ನು ಜೀವನ್ ಮುಕ್ತ ಸ್ಥಿತಿಯಲ್ಲಿ ನೋಡುವರು. ಭವಿಷ್ಯದಲ್ಲಿ ಜೀವನ ಮುಕ್ತರಾಗುವಿರಿ ಆದರೆ ಜೀವನ ಮುಕ್ತಿಯ ಸಂಸ್ಕಾರ ಈಗಿನಿಂದಲೇ ಪ್ರತ್ಯಕ್ಷ ಮಾಡಿಕೊಳ್ಳಿ. ಹಾಗೂ ನಿರಂತರ ಕರ್ಮಯೋಗಿ, ನಿರಂತರ ಸಹಜಯೋಗಿ, ನಿರಂತರ ಮುಕ್ತ ಆತ್ಮನ ಸಂಸ್ಕಾರವನ್ನು ಈಗಿನಿಂದಲೇ ಅನುಭವದಲ್ಲಿ ತಂದುಕೊಳ್ಳಿ, ಏಕೆ? ಬಾಪ್‌ದಾದಾರವರು ಮೊದಲು ಸಹ ಸೂಚನೆಯನ್ನು ಕೊಟ್ಟಿದ್ದರು- ಸಮಯದ ಪರಿವರ್ತನೆಯು ವಿಶ್ವಪರಿವರ್ತಕ ಆತ್ಮರಾದ ನಿಮ್ಮ ಸಲುವಾಗಿಯೇ ಪ್ರತೀಕ್ಷೆ ಮಾಡುತ್ತದೆ. ಪ್ರಕೃತಿ ನೀವು ಪ್ರಕೃತಿಪತಿ ಆತ್ಮರಿಗಾಗಿ ವಿಜಯದ ಹಾರವನ್ನು ಹಿಡಿದುಕೊಂಡು ಆಹ್ವಾನ ಮಾಡುತ್ತಿದೆ. ಸಮಯ ವಿಜಯದ ಗಂಟೆಯನ್ನು ಬಾರಿಸುವುದಕ್ಕಾಗಿ ಭವಿಷ್ಯ ರಾಜ್ಯ ಅಧಿಕಾರಿ ಆತ್ಮರಾದ ನಿಮ್ಮನ್ನು ನೋಡುತ್ತಿದೆ- ಯಾವಾಗ ಗಂಟೆಯನ್ನು ಬಾರಿಸಲಿ ಎಂದು, ಭಕ್ತಾತ್ಮರು ಸದಾ ನೆನಪು ಮಾಡುತ್ತಿದ್ದಾರೆ- ಯಾವಾಗ ನಮ್ಮ ಪೂಜ್ಯ ದೇವಾತ್ಮರು ನಮ್ಮ ಮೇಲೆ ಪ್ರಸನ್ನರಾಗಿ ನಮಗೆ ಮುಕ್ತಿಯ ವರದಾನವನ್ನು ಕೊಡುತ್ತಾರೆ ಎಂದು! ದುಃಖಿ ಆತ್ಮರು ಕರೆಯುತ್ತಿದ್ದಾರೆ- ಯಾವಾಗ ದುಃಖಹರ್ತ ಸುಖಕರ್ತ ಆತ್ಮರು ಪ್ರತ್ಯಕ್ಷರಾಗುವರು! ಎಂದು ಇವರೆಲ್ಲರೂ ನಿಮಗಾಗಿ ಕಾಯುತ್ತಿದ್ದಾರೆ ಹಾಗೂ ಆಹ್ವಾನ ಮಾಡುತ್ತಿದ್ದಾರೆ ಆದ್ದರಿಂದ ಓ ದಯಾಹೃದಯಿ ವಿಶ್ವಕಲ್ಯಾಣಕಾರಿ ಆತ್ಮರೇ! ಈಗ ಇವರ ಪ್ರತೀಕ್ಷೆಯನ್ನು ಸಮಾಪ್ತಿ ಮಾಡಿರಿ. ನಿಮಗಾಗಿ ಎಲ್ಲರೂ ಕಾಯುತ್ತಿದ್ದಾರೆ. ನೀವು ಮುಕ್ತರಾಗಿಬಿಟ್ಟರೆ ಸರ್ವ ಆತ್ಮರು, ಪ್ರಕೃತಿ, ಭಕ್ತರು ಮುಕ್ತರಾಗುತ್ತಾರೆ. ಎಂದ ಮೇಲೆ ಮುಕ್ತರಾಗಿ, ಮುಕ್ತಿಯ ದಾನ ಕೊಡುವಂತಹ ಮಾಸ್ಟರ್ ದಾತರಾಗಿ. ಈಗ ವಿಶ್ವಪರಿವರ್ತನೆಯ ಜವಾಬ್ದಾರಿಯ ಕಿರೀಟಧಾರಿ ಆತ್ಮರಾಗಿ. ಜವಾಬ್ದಾರರಾಗಿದ್ದೀರಲ್ಲವೇ! ತಂದೆಯ ಜೊತೆ ಸಹಯೋಗಿಗಳಾಗಿದ್ದೀರಿ. ನಿಮಗೆ ದಯೆ ಬರುವುದಿಲ್ಲವೇ, ಹೃದಯದ ದುಃಖದ ಕೂಗು ಅನುಭವವಾಗುತ್ತಿಲ್ಲವೇ? ಹೇ ವಿಶ್ವ ಪರಿವರ್ತಕ ಆತ್ಮರೇ ಈಗ ತಮ್ಮ ಜವಾಬ್ದಾರಿಯ ಪಟ್ಟಾಭಿಷೇಕವನ್ನು ಆಚರಿಸಿಕೊಳ್ಳಿರಿ. ಈಗ ಫಂಕ್ಷನ್ ಸಾಕಾ? ಆದರೆ ಫಂಕ್ಷನ್ನ ಫಲಿತಾಂಶವೇನು? ಗೋಲ್ಡನ್ ಚುನ್ನಿ ಹಾಕಿಕೊಂಡಿದ್ದೀರಿ ಮತ್ತು ಕಿರೀಟವನ್ನು ಇಟ್ಟುಕೊಂಡಿದ್ದೀರಿ, ಆಚರಿಸಿಕೊಂಡಿದ್ದೀರಿ. ಇದಕ್ಕೆ ಬಾಪ್‌ದಾದಾ ಸಹ ಖುಷಿಪಡುತ್ತಿದ್ದಾರೆ ಆದರೆ ಚೆನ್ನಿಯನ್ನು ಹಾಕಿಕೊಳ್ಳುವುದು, ಮಾಲೆಯನ್ನು ಧರಿಸುವುದು, ಗಂಧವನ್ನು ಇಟ್ಟುಕೊಳ್ಳುವುದು, ಪಾಂಡವರು ಕಿರೀಟವನ್ನು ಧರಿಸುವುದು ಹೀಗೆ ಆಚರಿಸಿಕೊಳ್ಳುವುದು ಎಂದರೆ ಜವಾಬ್ದಾರಿಯನ್ನು ನಿಭಾಯಿಸುವುದು. ಮಕ್ಕಳು ಖುಷಿ ಪಟ್ಟಿದ್ದಾರೆ ಮತ್ತು ತಂದೆ ಇನ್ನೂ ಖುಷಿಪಟ್ಟಿದ್ದಾರೆ ಆದರೆ ಭವಿಷ್ಯವೇನು? ಇವೆಲ್ಲವುಗಳನ್ನು ಬೀರುವಾನಲ್ಲಿ ಇಟ್ಟುಕೊಳ್ಳುವುದೇ ಆಚರಿಸಿಕೊಳ್ಳುವುದಲ್ಲ ಮನಸ್ಸಿನಲ್ಲಿ ಸ್ಮೃತಿ ಇರಬೇಕು ಆಚರಿಸಿಕೊಳ್ಳುವುದು ಎಂದರೆ, ತಂದೆಯ ಕಾರ್ಯದಲ್ಲಿ ಜವಾಬ್ದಾರರಾಗುವುದು. ಇಷ್ಟವೇ ತಾನೇ? ಚುನ್ನಿ ಧರಿಸಿದರೆ ಸಾಕಾ? ಇದು ಒಳ್ಳೆಯದೇ, ಬಾಪ್‌ದಾದಾ ಸಹ ಒಳ್ಳೆಯದೆಂದೇ ಭಾವಿಸುತ್ತಿದ್ದಾರೆ ಆದರೆ ಅವಿನಾಶೀ ಸಹಯೋಗಿ ಆಗಬೇಕು.

ಈ ವರ್ಷದ ಸಲುವಾಗಿ ಬಾಪ್‌ದಾದಾ ಸೂಚನೆಯನ್ನು ಕೊಡುತ್ತಿದ್ದಾರೆ - ಈ ವರ್ಷದ ಕೊನೆಯಲ್ಲಿ ಜನವರಿ 18ನೇ ದಿನಾಂಕಕ್ಕೆ ಮುಕ್ತಿ ವರ್ಷವನ್ನು ಆಚರಿಸಿಕೊಳ್ಳಬೇಕು. ಚಪ್ಪಾಳೆಯನ್ನು ಹೊಡೆಯುವವರು ತಯಾರಾಗುತ್ತೇವೆ ಎಂದು ಯೋಚಿಸುತ್ತಿದ್ದೀರಾ? ನಾವು ತಯಾರಾಗಬೇಕೆಂದು ಯೋಚಿಸುತ್ತಿದ್ದೇವೆ ಆದರೆ ಏನು ಮಾಡುವುದು, ಹೀಗಾಯಿತು, ಹಾಗಾಯಿತು ಎಂದು ಹೇಳಬೇಡಿರಿ. ಇಂತಹ ವಿಷಯಗಳಿಂದಲೂ ಮುಕ್ತರಾಗಬೇಕು. ಏನು ಮಾಡುವುದು, ಎಂದು ಹೇಳುವುದಲ್ಲ. ತಯಾರಾಗಲೇಬೇಕು, ಈ ಭಾಷೆಯಿಂದಲೂ  ಮುಕ್ತರಾಗಬೇಕು. ಏನೇ ಆದರೂ ಆಗಲೇಬೇಕು, ತಯಾರಾಗಲೇಬೇಕು ಎಂದು ಯೋಚಿಸಬೇಕು. ಬಾಪ್‌ದಾದಾರವರು ಮೊದಲು ಸಹ ಹೇಳಿದ್ದರು 100 ಹಿಮಾಲಯದಂತಹ ದೊಡ್ಡ ದೊಡ್ಡ ವಿಘ್ನಗಳು ಬಂದರೂ ಸಹ ನಾವು ಸರಿಯುವುದಿಲ್ಲ, ಸೋಲುವುದಿಲ್ಲ, ಪಟ್ಟಾಭಿಷೇಕ, ಮುಕ್ತಿ ವರ್ಷವನ್ನು ಅವಶ್ಯವಾಗಿ ಆಚರಿಸುತ್ತೇವೆ ಎಂದು ಹೇಳಬೇಕು. ಬಾಪ್‌ದಾದಾರವರು ಪ್ರತಿದಿನದ  ಚಾರ್ಟ್ ನೋಡುವರು. ಇಲ್ಲಿಂದ ಹೋದ ಮೇಲೆ ರೈಲಿನಲ್ಲಿಯೇ ಏನಾಗುವುದೋ ಗೊತ್ತಿಲ್ಲ, ಮನೆಗೆ ಹೋದ ಮೇಲೆ ಹಂಸಗಳು ಹಾಗೂ ಕೊಕ್ಕರೆಯ ಜಗಳ ಶುರುವಾಗಿ ಹೋಯಿತು, ಹೀಗಾಗಿ ಹೋಯಿತು , ಹಾಗಾಗಿ ಹೋಯಿತು ಎಂದು ಹೇಳಬೇಡಿ. ಇದನ್ನು ಆಲಿಸುವುದಿಲ್ಲ. ನಿಮ್ಮ ಪತ್ರವನ್ನು ವೇಸ್ಟ್ ಪೇಪರ್(ವ್ಯರ್ಥ ಕಾಗದ) ನ ಡಬ್ಬಿಯಲ್ಲಿ ಹಾಕುವರು, ಆಲಿಸುವುದಿಲ್ಲ. ದೃಢ ಸಂಕಲ್ಪ ಮಾಡಿ- ಆಗಲೇಬೇಕು. ಎಲ್ಲಿ ದೃಢತೆ ಇದೆಯೋ ಅಲ್ಲಿ ಸಫಲತೆ ಸಿಗದೇ ಇರುವುದು  ಅಸಾಧ್ಯವಾಗಿದೆ. ಹಾಗಾದರೆ ಎಲ್ಲರೂ ದೃಢ ಸಂಕಲ್ಪದವರು ಇದ್ದೀರಲ್ಲವೇ. ಶಿಕ್ಷಕಿಯರು ಕೈಯೆತ್ತಿರಿ, ಶಿಕ್ಷಕಿಯರು ಬಹಳ ಜನ ಇದ್ದಾರೆ. ಎಲ್ಲಾ ಸೇವಾ ಕೇಂದ್ರಗಳನ್ನು ಖಾಲಿ ಮಾಡಿಕೊಂಡು ಬಂದಿದ್ದೀರಾ?

ನೋಡಿ ಒಂದು ಖುಷಿಯ ಸಮಾಚಾರವನ್ನು ಹೇಳುತ್ತೇವೆ- ಬಾಪ್ ದಾದಾರವರು ನೋಡಿದರು, ಈಗಲೇ ನೋಡಿದರು, ಕೇಳಿ ಬಂದಿದೆ- ಸರ್ವ ಮಧುಬನದವರು ತಮ್ಮ ಪರಿವರ್ತನೆಯ ಲಕ್ಷ್ಯವನ್ನು ಬಹಳ ಚೆನ್ನಾಗಿ ಇಟ್ಟುಕೊಂಡಿದ್ದಾರೆ, ಲಕ್ಷಣವನ್ನಂತೂ ನೋಡುತ್ತೇವೆ ಆದರೆ ಲಕ್ಷ್ಯ ಬಹಳ ಚೆನ್ನಾಗಿ ಇಟ್ಟುಕೊಂಡಿದ್ದೀರಿ. ತಮ್ಮಲ್ಲಿ ಯಾವ ಅಂತರ ಬಂದಿದೆ ಅದನ್ನು ಸಹ ಬರೆದಿದ್ದೀರಿ ಆದರೆ , ಬಾಪ್‌ದಾದಾರವರಿಗೆ ಖುಷಿಯಿದೆ- ಅಂತರ ಬರಲು ಶುರುವಾಗಿದೆ, ಮುಂದೆಯೂ ಆಗುತ್ತಾ ಹೋಗುತ್ತದೆ. ಆದರೆ ಎಲ್ಲರೂ ತಮ್ಮ ದೃಢ ಸಂಕಲ್ಪದ ಉತ್ಸಾಹ ಉಲ್ಲಾಸವನ್ನು ಚೆನ್ನಾಗಿ ತೋರಿಸಿದ್ದೀರಿ. ಈಗ ಹಾಳೆಯಲ್ಲಿ ಬರೆದಿದ್ದೀರಿ ಆದರೆ ಹಾಳೆಯಲ್ಲಿಯೂ ಸಹ ಮೊದಲ ಹೆಜ್ಜೆಯಾಗಿರುತ್ತದೆ. ಬಾಪ್‌ದಾದಾರವರಿಗೆ ಖುಷಿಯಾಯಿತು, ಏಕೆ? ಇಡೀ ಪ್ರಪಂಚಕ್ಕಾಗಿ ಅರ್ಜುನರು  ಮಧುಬನ ನಿವಾಸಿಯವರೇ ಆಗಿದ್ದಾರೆ. ನಿಮಿತ್ತ ಮಧುಬನ ನಿವಾಸಿಯಾಗಿದ್ದಾರೆ, ಎರಡನೆಯ ನಂಬರ್ ದೇಶ ವಿದೇಶದ ನಿಮಿತ್ತ ಸೇವಾಧಾರಿ ಶಿಕ್ಷಕಿಯರು ಆಗಿದ್ದಾರೆ ಹಾಗೂ ಸರ್ವ ಸಹಯೋಗಿ ಜೊತೆಗಾರರು ಇಡೀ ಪರಿವಾರ ಬ್ರಾಹ್ಮಣ ಆತ್ಮರಾಗಿದ್ದಾರೆ. ಮಧುಬನದ ನಕ್ಷೆಯನ್ನು ಬಾಪ್‌ದಾದಾರವರು ನೋಡಿದರೆ ಬದಲಾಗಿರುವಂತೆ ಕಾಣಿಸಬೇಕು. ಮಧುಬನದವರು ಕಡಿಮೆ ಬಂದಿದ್ದಾರೆ ಎನಿಸುತ್ತದೆ. ಕೆಲವರಂತೂ ಬರೆಯಲೇ ಇಲ್ಲ. ಮುಂದೆ ಕುಳಿತಿರುವವರು ಕಡಿಮೆ ಬರೆದಿದ್ದಾರೆ. ಬಹಳ ವ್ಯಸ್ತರಾಗಿರಬಹುದು. ಆದರೆ ಯಾವಾಗ ಕೆಲಸವಿರುತ್ತದೆಯೋ ಆಗ ಬರೆಯುವುದರಿಂದಲೂ ಸಹ ಅಂಕಗಳು ಜಮಾ ಆಗುತ್ತದೆ. ಒಂದು ವೇಳೆ ಬರೆಯುವುದಿಲ್ಲ ಎಂದರೆ ಮಾರ್ಕ್ಸ್ ಕಡಿಮೆಯಾಗಿ ಹೋಗುತ್ತದೆ, ಹಾನಿ ಮಾಡುತ್ತದೆ. ಏನೆಲ್ಲಾ ನಿರ್ದೇಶನಗಳು

ಸಿಗುತ್ತದೆಯೋ, ಆ ನಿರ್ದೇಶನಗಳು ತಂದೆಯ ಮೂಲಕ ಸಿಗುತ್ತದೆ, ಭಲೆ ನಿಮಿತ್ತ ಆತ್ಮರು, ದಾದಿಯರ ಮೂಲಕ ಸಿಗುತ್ತದೆ ಅವುಗಳಿಗೆ ಗೌರವ ಕೊಡುವುದು ಅತಿ ಅವಶ್ಯಕವಾಗಿದೆ. ಇದರಲ್ಲಿ ನೆಪ ಹೇಳಬಾರದು, ಹಾಗೂ ಸೋಮಾರಿಯಾಗಬಾರದು. ಮುಂಬರುವ ಸಮಯಕ್ಕಾಗಿ ಬಾಪ್‌ದಾದಾರವರು ಈಗಲೇ ತಿಳಿಸುತ್ತಿದ್ದಾರೆ- ಅಂಕಗಳು ಜಮಾ ಆಗಿಲ್ಲ. ಆದ್ದರಿಂದ ಇದಕ್ಕೆ ಮಹತ್ವವನ್ನು ಕೊಡುವುದು ಎಂದರೆ ಮಹಾನ್ ಆಗುವುದು. ಹಗುರವಾದ ಮಾತನ್ನು ಆಡಬೇಡಿ. ಮಕ್ಕಳು ಬಹಳ ಚತುರರಾಗಿದ್ದಾರೆ, ಹೇಳುತ್ತಾರೆ. ಬಾಪ್‌ದಾದಾ ಅವರಂತೂ ತಿಳಿದಿದ್ದಾರೆ. ಹೌದು ತಿಳಿದಿದ್ದಾರೆ ಆದರೂ ಏಕೆ ಹೇಳಬೇಕು? ತಿಳಿದುಕೊಂಡಿದ್ದರೂ ಹೇಳಬೇಕೆ! ಈ ರೀತಿ ಬಿಡಿಸಿಕೊಳ್ಳಬಾರದು, ಇಂತಹ ಕಾರ್ಯಗಳಿಗೆ, ಚಿಕ್ಕ ಚಿಕ್ಕವರಿಗೆ ಆಯಿತು (ಹಾಂಜಿ) ಎಂದು ಹೇಳುವುದರ ಎಕ್ಸ್ಟ್ರಾ ಅಂಕಗಳು ಜಮಾ ಆಗುತ್ತದೆ. ಕೆಲವರು ಇಂತಹ ವಿದ್ಯಾರ್ಥಿಗಳಿದ್ದಾರೆ. ಯಾವುದೇ ಹಿಂದಿನ ಸಂಸ್ಕಾರದ ವಶವಾಗಿ ಬಹಳ ಒಳ್ಳೆಯ ಉತ್ಸಾಹ ಉಲ್ಲಾಸದಲ್ಲಿ ಮುಂದುವರೆಯುತ್ತಾರೆ. ಆದರೆ ಯಾವುದಾದರೂ ಒಂದು ಮಧುರವಾದ ದಾರ, ಬಹಳ ಸೂಕ್ಷ್ಮ ದಾರ ಅವರನ್ನು ಮುಂದುವರೆಯಲು ಬಿಡುವುದಿಲ್ಲ. ಅವರು ಸಹ ತಿಳಿಯುತ್ತಾರೆ ಇದು ಸೂಕ್ಷ್ಮವಾದ ದಾರ ಉಳಿದುಕೊಂಡಿದೆ ಎಂದು, ಆದರೆ..... ಆದರೆ ಎಂದು ಹೇಳುತ್ತಾರೆ. ಆದರೆ ಚಿಕ್ಕ-ಚಿಕ್ಕ ಸಾಧಾರಣ ಮಾತುಗಳಲ್ಲಿ 'ಆಯಿತು' ಎಂದು ಹೇಳಿ ಅಂಕಗಳನ್ನು ಪಡೆದುಕೊಂಡು ಬಿಡುವಂತಹ ಪುರುಷಾರ್ಥಿಗಳು ಇದ್ದಾರೆ. ಈ ರೀತಿ ಸ್ವಲ್ಪ ಸ್ವಲ್ಪ ಅಂಕಗಳನ್ನು ಒಟ್ಟುಗೂಡಿಸುತ್ತಾ ಅವರು ಮುಂದುವರೆದು ಬಿಡಬಹುದು. ಬಾಪ್‌ದಾದಾರವರ ಬಳಿ ಇಂತಹವರು ಸಹ ಉದಾಹರಣೆಯ ರೂಪದಲ್ಲಿ ಇದ್ದಾರೆ. ಆದ್ದರಿಂದ ಸಹಜ ವಿಧಿಯಾಗಿದೆ ಚಿಕ್ಕ ಚಿಕ್ಕ ಮಾತಿಗೆ 'ಆಯಿತು' ಎಂದು ಹೇಳಿ ಅಂಕಗಳನ್ನು ಜಮಾ ಮಾಡುತ್ತಾ ಹೋಗಿ. ಕಟ್ ಮಾಡಬೇಡಿ, ಜಮಾ ಮಾಡಿ. ಬಾಪ್‌ದಾದಾರವರು ನೋಡಿದರು ಬಹುಮತವಾಗಿ ಮಕ್ಕಳು ತಮ್ಮ ಉತ್ಸಾಹ ಉಲ್ಲಾಸವನ್ನು ಚೆನ್ನಾಗಿ ತೋರಿಸಿದ್ದಾರೆ ಆದ್ದರಿಂದ ದೃಢ ಸಂಕಲ್ಪಕ್ಕಾಗಿ ವಿಶೇಷ ಮಧುಬನ ನಿವಾಸಿ ಮಕ್ಕಳಿಗೆ ಬಾಪ್‌ದಾದಾರವರು ಆಯಿತು ಪ್ರಭು( ಹಾಂಜಿ) ಎಂದು ಹೇಳಿದ್ದಕ್ಕಾಗಿ ಶುಭಾಶಯವನ್ನು ಕೊಡುತ್ತಿದ್ದಾರೆ. ನೆನಪು, ಪ್ರೀತಿಯನ್ನು ಕೊಡುತ್ತಿದ್ದಾರೆ. ಲಕ್ಷ ಲಕ್ಷದಷ್ಟು ನೆನಪು ಪ್ರೀತಿಯನ್ನು ಕೊಡುತ್ತಿದ್ದಾರೆ. ಏಕೆ? ಬಾಪ್‌ದಾದಾರವರ ಸ್ವರೂಪವನ್ನು ಪ್ರತ್ಯಕ್ಷ ಮಾಡುವಂತಹ ಗಾಜಿನ ಅರಮನೆ ಮಧುಬನವಾಗಿದೆ. ಒಂದು ಮಾತಿನ ಖುಷಿಯಂತೂ ಇದೆ, ಈಗ ಕಾಗದದಲ್ಲಿ ಬರೆದಿರುವುದನ್ನು ಕರ್ಮದಲ್ಲಿ ತರಲೇಬೇಕು. ಸರಿಯೇ! ಒಳ್ಳೆಯದು. ಶುಭಾಶಯಗಳು.

30 ವರ್ಷಗಳಿಂದ ಇರುವವರು ಬಹಳ ಆನಂದದಲ್ಲಿ ಇದ್ದೀರಲ್ಲವೇ? (ಸಾವಿರ ಜನರು ಬಂದಿದ್ದಾರೆ) ಎದ್ದು ನಿಂತುಕೊಳ್ಳಿರಿ ಎಂದು ಬಾಪ್‌ದಾದಾ ಹೇಳಿದರೆ ಮಾತೆಯರು ಮುಂದಕ್ಕೆ ಬಂದುಬಿಡುತ್ತಾರೆ ಆದ್ದರಿಂದ ಎದ್ದು ನಿಲ್ಲಲು ಹೇಳುತ್ತಿಲ್ಲ. ಉತ್ಸವವನ್ನು ಆಚರಿಸಿಕೊಳ್ಳುವರು ಕೈಯನ್ನು ಎತ್ತಿರಿ. ಬಾಪ್‌ದಾದಾರವರಿಗೆ ಈ ಗ್ರೂಪ್ ಎಂದರೆ ಬಹಳ ಬಹಳ ಬಹಳ ಹೃದಯಪೂರ್ವಕ ಗೌರವವಿದೆ. ಏಕೆ? ಏಕೆಂದರೆ ಈ ಪಾಂಡವರು ಮತ್ತು ಮಾತೆಯರೇ ಸೇವೆಯ ಸ್ಥಾಪನೆಯ ಆದಿಯಲ್ಲಿ ಸೇವಾಕೇಂದ್ರಗಳನ್ನು ತೆರೆಯುವ ಸಮಯದಲ್ಲಿ. ಬಡ ಜೀವನವಿದ್ದಾಗಲೂ ಆ ಬಡ ಜೀವನದಲ್ಲಿಯೂ ಸೇವಾಕೇಂದ್ರಗಳನ್ನು ತೆರೆದರು ಅಂತಹ ಅವಸರ ಸಮಯದಲ್ಲಿ ಈ ಸೇವೆ ತಮ್ಮ ತನು, ಮನ, ಧನಗಳಿಂದ ನಿಮಿತ್ತವಾಗಿ ಸೇವಾ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಅವಸರ ಸಮಯದಲ್ಲಿ ಯಾರಾದರೂ ಸಹ ಯೋಗಿಯಾದರೆ ಅವರ 8 ಪೈಸೆಗಳು ಸಹ

ಎಂಟು ಕೋಟಿಗೆ ಸಮಾನವಾಗಿ ಬಿಡುತ್ತವೆ ಬಾಪ್‌ದಾದಾರವರಿಗೆ ನೆನಪಿದೆ ಅವರು ಸ್ವಯಂ ಬಂಧನಗಳಲ್ಲಿ ಇರುತ್ತಲೂ ಒಂದು ಬಟ್ಟಲಿನಲ್ಲಿ ಹಿಟ್ಟು, ಒಂದು ಬಟ್ಟಲಿನಲ್ಲಿ ಸಕ್ಕರೆ, ಒಂದು ಬಟ್ಟಲಿನಲ್ಲಿ ತುಪ್ಪ, ಹೀಗೆ ಬಟ್ಟಲು, ಬಟ್ಟಲುಗಳನ್ನು ತರುತ್ತಿದ್ದರು ಎಂದರೆ ಎಷ್ಟು ಸತ್ಯವಾದ ಮನಸ್ಸು ಎಂದು ಯೋಚಿಸಿರಿ. ತಮ್ಮ ಮನೆಯ ಖರ್ಚಿನಿಂದ ಬಾಪ್‌ದಾದಾರವರ ಸೇವಾಕೇಂದ್ರವನ್ನು ತುಂಬಿ ಬಿಟ್ಟಿದ್ದರು. ತಮ್ಮ ವೈಯಕ್ತಿಕ ಜಮಾ ಖಾತೆಯಿಂದ ತಮ್ಮ ಖರ್ಚುಗಳನ್ನು ಕಡಿಮೆ ಮಾಡಿಕೊಂಡು ಸೇವಾ ಕೇಂದ್ರಗಳನ್ನು ಸ್ಥಾಪಿಸಿದರು. ಎಂದರೆ ಇವರಿಗೆ ಎಷ್ಟು ಭಾಗ್ಯ. ಈ ವಿಧವಾಗಿ ಸಮಯಕ್ಕೆ ಸಹಯೋಗಿಯಾದ ಆತ್ಮರಿಗೆ ಬಾಪ್‌ದಾದಾ ಸಹ ನಮಸ್ತೆ ಹೇಳುತ್ತಿದ್ದಾರೆ. ಇವರ ಅನುಭವ ಬಹಳ ಒಳ್ಳೆಯದು, ಭಾಗವತವೆಲ್ಲವೂ ಇವರದೇ, ಆದ್ದರಿಂದ ಬಾಪ್‌ದಾದಾ ಖುಷಿಪಡುತ್ತಿದ್ದಾರೆ. ಎಲ್ಲರೂ ಬಹಳ ಉತ್ಸಾಹ ಉಲ್ಲಾಸಗಳಿಂದ ಪ್ರಯತ್ನ ಮಾಡಿ ತಲುಪಿದ್ದೀರಿ. ಇದಕ್ಕೂ ಬಾಪ್‌ದಾದಾ ಖುಷಿಪಡುತ್ತಿದ್ದಾರೆ. ಕಟ್ಟಿಗೆ ಹಿಡಿದುಕೊಂಡು ನಡೆಯುತ್ತಲೂ ಬಂದಿದ್ದಾರೆ. ನಿಮಗೆ ಎರಡು ಕಾಲುಗಳು, ಆದರೆ ಇವರಿಗೆ ಮೂರು ಕಾಲು. ಅವರು ನಡೆಯುತ್ತಿದ್ದರೆ ದೃಶ್ಯ ಚೆನ್ನಾಗಿದೆ ಅಲ್ಲವೇ. ಇವರನ್ನು ನಡೆಸಿ ನೋಡಿರಿ. ನಾಳೆ ಇವರಿಂದಲೇ ಯಾತ್ರೆಯನ್ನು ಮಾಡಿಸಿ, ಕ್ಲಾಸ್ ರೂಮ್ ನಿಂದ ಭಂಡಾರದವರೆಗೆ ನಡೆಸಿರಿ ಸಾಕು. ಎಷ್ಟು ನಡೆಯುತ್ತಾರೆಯೋ ನೋಡಿರಿ. ದೃಶ್ಯ ಬಹಳ ಚೆನ್ನಾಗಿರುತ್ತದೆ. ಯಾರೂ ಬಿಳಬಾರದು. ಯಾರಾದರೂ ಬಿದ್ದರೆ ಕುಳಿತುಕೊಂಡು ಬಿಡಿ. ಬೀಳಬೇಡಿರಿ. ಇವರಿಂದ ನಾಟ್ಯವನ್ನು ಮಾಡಿಸಬೇಕು ಎಂದುಕೊಳ್ಳುತ್ತಿದ್ದಾರೆ. ಆದರೆ ನೀವೆಲ್ಲರೂ ಗೊಂದಲಕ್ಕೊಳಗಾಗಿಬಿಡುತ್ತೀರಿ ಆದರಿಂದ ಕುಳಿತುಕೊಂಡೇ ನಾಟ್ಯವನ್ನು ಮಾಡಿರಿ. ಕೈಯಿಂದ, ಪಾದಗಳಿಂದ ಅಲ್ಲ ಒಳ್ಳೆಯದು. ನಿಮಗೂ ಚೆನ್ನಾಗಿದೆಯಲ್ಲವೇ ವೃದ್ಧರ ಆಶೀರ್ವಾದಗಳು ಬಹಳ ಚೆನ್ನಾಗಿರುತ್ತವೆ. ಪಾಂಡವರು ಕೂಡ ಒಳ್ಳೆಯವರು, ಪಾಂಡವರ ಸಹಯೋಗ ಕೂಡ ಕಡಿಮೆ ಇಲ್ಲ. ಹೊರಗೆ ತಿರುಗುವುದಂತು ಪಾಂಡವರೇ ಆದ್ದರಿಂದ ಪಾಂಡವರಿಗೂ ಬಾಪ್‌ದಾದಾ ಮತ್ತು ಪರಿವಾರ ಎಲ್ಲರಿಂದಲೂ ಬಹಳ ಬಹಳ ಹೃದಯಪೂರ್ವಕ ಆಶೀರ್ವಾದಗಳು ಒಳ್ಳೆಯದು.

**ನಾಲ್ಕು ಕಡೆ ಇರುವಂತಹ ಅತಿ ಶ್ರೇಷ್ಠ ಭಾಗ್ಯವಾನ್ ಆತ್ಮರಿಗೆ, ಪರಮಾತ್ಮನ ಪಾಲನೆಯ ಅಧಿಕಾರಿ ಆತ್ಮರಿಗೆ, ಪರಮಾತ್ಮನ ಓದಿನ ಅಧಿಕಾರಿ ಆತ್ಮರಿಗೆ, ಪರಮಾತ್ಮ ಸದ್ಗುರುವಿನ ವರದಾನಗಳಿಗೆ ಅಧಿಕಾರಿ ಆತ್ಮರಿಗೆ, ಸದಾ ಧೃಡತೆಯಿಂದ ಸಫಲತೆಯನ್ನು ಪಡೆಯುವ ಅಧಿಕಾರಿಗಳಿಗೆ, ಸದಾ ಅಖಂಡಯೋಗಿ, ಅಚಲಯೋಗಿ, ಸದಾ ವಿಶ್ವ ಪರಿವರ್ತನೆಯ ಜವಾಬ್ದಾರಿ ಕಿರೀಟಧಾರರಿಗೆ, ಸದಾ ಸರ್ವ ಪ್ರಾಪ್ತಿಗಳನ್ನು ಪ್ರತ್ಯಕ್ಷವಾಗಿ ಅನುಭವ ಮಾಡಿಕೊಳ್ಳುವ ವಿಶೇಷ ಆತ್ಮರಿಗೆ ಬಾಪ್‌ದಾದಾರವರ ಪ್ರಿಯ ಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 30-03-1998.

***ಸರ್ವಪ್ರಾಪ್ತಿಗಳ ಸ್ಮೃತಿಯನ್ನು ಪ್ರತ್ಯಕ್ಷ ಮಾಡಿಕೊಂಡು ಅಚಲ ಸ್ಥಿತಿಯ ಅನುಭವ ಮಾಡಿ ಹಾಗೂ ಜೀವನ್ ಮುಕ್ತರಾಗಿ.***

ತಂದೆಯ ರೂಪದಲ್ಲಿ ಪರಮಾತ್ಮನ ಪಾಲನೆಯನ್ನು ಅನುಭವ ಮಾಡುತ್ತಿದ್ದೀರಿ ಮತ್ತು ಸರ್ವಪ್ರಾಪ್ತಿ ಸ್ವರೂಪದ ಅನುಭವವಾಗುತ್ತದೆ. ಶಿಕ್ಷಕನ ಮುಖಾಂತರ ಶಿಕ್ಷಣ ಸಿಗುತ್ತದೆ ನೀವು ಹಾಗೂ ತಂದೆ ಇದೇ ಎರಡು ಶಬ್ದಗಳಲ್ಲಿ ಚಕ್ರ, ಡ್ರಾಮಾ, ಕಲ್ಪವೃಕ್ಷ ಎಲ್ಲಾ ಜ್ಞಾನವು ಸಮಾವೇಶವಾಗಿದೆ. ಸದ್ಗುರುವಿನ ಮುಖಾಂತರ ಎಂತಹ ಶ್ರೀಮತ ಸಿಗುತ್ತದೆ ಎಂದರೆ ಅದರಿಂದ ಸದಾ ಕಾಲಕ್ಕಾಗಿ ಏನು ಮಾಡಲಿ, ಹೇಗೆ ನಡೆಯಲಿ, ಈ ರೀತಿ ಮಾಡಲೇ ಅಥವಾ ಬೇಡವೇ ಏನಾಗುವುದೋ ಇಂತಹ ಎಲ್ಲಾ ಪ್ರಶ್ನೆಗಳು ಸಮಾಪ್ತಿಯಾಗಿ ಈ ಎಲ್ಲಾ ಪ್ರಶ್ನೆಗಳ ಒಂದೇ ಉತ್ತರವೂ ತಂದೆಯನ್ನು ಅನುಸರಿಸಿರಿ (ಫಾಲೋ ಫಾದರ್), ಸಾಕಾರಕರ್ಮದಲ್ಲಿ ಬ್ರಹ್ಮಾ ತಂದೆಯನ್ನು ಅನುಸರಿಸಿರಿ, ನಿರಾಕರ ಸ್ಥಿತಿಯಲ್ಲಿ ಅಶರೀರಿ ಯಾಗುವುದರಲ್ಲಿ ಶಿವ ತಂದೆಯನ್ನು ಅನುಸರಿಸಿರಿ. ತಂದೆ ಹಾಗೂ ಅಣ್ಣ (ಬಾಪ್ ದಾದಾ)ರವರನ್ನು ಅನುಸರಿಸುವುದರಿಂದ ಪ್ರಶ್ನಾರ್ಥಕ ಚಿಹ್ನೆ ಸಮಾಪ್ತಿಯಾಗುವುದು ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಶಿವ ಪರಮಾತ್ಮ ನನಗೆ ಕೇವಲ ತಂದೆಯಲ್ಲ ಟೀಚರ್, ಸದ್ಗುರು ಸಹ ಆಗಿದ್ದಾರೆ.

2. ನಾನು ಪರಮಾತ್ಮನ ಪ್ರೀತಿ ಪರಮಾತ್ಮನ ಪಾಲನೆಯಲ್ಲಿ ಪಾಲಿಸಲ್ಪಡುವ ಭಾಗ್ಯವಾನ್ ಆತ್ಮ, ಸರ್ವಪ್ರಾಪ್ತಿ ಸ್ವರೂಪ.

3. ನಾನು ತಂದೆಯು ಶಿಕ್ಷಕನಾಗಿ ಕೊಡುವ ಶಿಕ್ಷಣದಿಂದ ಮನಸ್ಸು, ಬುದ್ಧಿಯಲ್ಲಿ ಹಾರುವ ಕಲೆಯನ್ನು ಅನುಭವ ಮಾಡಿದ್ದೇನೆ.

4. ನಾನು ಏನು ಮಾಡಲಿ, ಹೇಗೆ ನಡೆಯಲಿ, ಹೀಗೆ ಮಾಡಲೇ ಅಥವಾ ಹಾಗೆ ಮಾಡಲೇ, ಇಂತಹ ಪ್ರಶ್ನೆಗಳಿಗೆ ಸದಾಕಾಲದ ಸಮಾಪ್ತಿ ಮಾಡಿ ಕರ್ಮದಲ್ಲಿ ಬ್ರಹ್ಮಾ ತಂದೆಯನ್ನು, ನಿರಾಕರ ಸ್ಥಿತಿ, ಅಶರೀರಿಯಾಗುವುದರಲ್ಲಿ ಶಿವ ತಂದೆಯನ್ನು ಅನುಸರಿಸುತ್ತಿದ್ದೇನೆ.

5. ನನಗೆ ಸದ್ಗುರುವಿನಿಂದ ಪ್ರತಿದಿನವೂ ವರದಾನಗಳು ಲಭಿಸುತ್ತಿವೆ.

6. ನಾನು ನನ್ನ ಭಾಗ್ಯದ ಪ್ರಾಪ್ತಿಗಳನ್ನು ಸದಾ ಬುದ್ಧಿಯಲ್ಲಿ ಪ್ರತ್ಯಕ್ಷ ಮಾಡಿ ವಿಘ್ನ ವಿನಾಶಕನಾಗಿದ್ದೇನೆ.

7. ನನಗೆ ಸೂಕ್ಷ್ಮವಾಗಿ ಪುರುಷಾರ್ಥದ ಮಾರ್ಗ ಕಷ್ಟವೆನಿಸಿದಾಗ, ಬುದ್ಧಿ ಏರುಪೇರಿಗೆ ಒಳಗಾದಾಗ, ನನ್ನ ಸ್ಮೃತಿ ಚಿಹ್ನೆಯಾದ ಅಚಲ್ ಘರನ್ನು ಸ್ಮೃತಿ ಮಾಡಿ ಅಚಲವಾಗಿ ಇದ್ದೇನೆ.

8. ನಾನು ಜೀವನ್ ಮುಕ್ತ ಸಂಸ್ಕಾರ ಮತ್ತು ನಿರಂತರ ಕರ್ಮ ಯೋಗಿ, ನಿರಂತರ ಸಹಜ ಯೋಗಿ, ನಿರಂತರ ಮುಕ್ತಿ ಆತ್ಮನ ಸಂಸ್ಕಾರವನ್ನು ಇಲ್ಲಿಯೇ ಅನುಭವ ಮಾಡಿದ್ದೇನೆ.

9. ನಾನು ಮುಕ್ತವಾಗಿ ಸರ್ವಾತ್ಮರಿಗೆ, ಭಕ್ತರಿಗೆ, ಪ್ರಕೃತಿಗೆ ಮುಕ್ತಿಯನ್ನು ಕೊಡುವ ದಾತನಾಗಿದ್ದೇನೆ.

10. ನಾನು ವಿಶ್ವ ಪರಿವರ್ತನೆಯ ಜವಾಬ್ದಾರಿ ಕಿರೀಟಧಾರಿಯಾಗಿರುವ ಅವಿನಾಶಿ ಸಹಯೋಗಿ.

11. ಏನು ಮಾಡುವುದು,  ಹೀಗಾಯಿತು, ಹಾಗಾಯಿತು ಎಂಬ ವಿಷಯಗಳಿಂದ, ಈ ಭಾಷೆಯಿಂದಲೂ ಮುಕ್ತಿಯಾದ ಜೀವನ್ ಮುಕ್ತ ಸ್ವರೂಪ.

12. ನಾನು 100ಹಿಮಾಲಯ ಪರ್ವತಗಳ ಸಮಾನವಾದ ವಿಘ್ನಗಳು ಬಂದರೂ ನಾನು ಪಟ್ಟಾಭಿಷೇಕ ಮತ್ತು ಮುಕ್ತಿ ವರ್ಷದ ಮಹೋತ್ಸವವನ್ನು ತಪ್ಪದೇ ಆಚರಿಸಿಕೊಳ್ಳುತ್ತಿದ್ದೇನೆ.

13. ನಾನು ಚಿಕ್ಕ ಚಿಕ್ಕ ವಿಷಯಗಳಲ್ಲಿಯೂ ಆಯಿತು ಎನ್ನುವುದರಿಂದ ಎಕ್ಸ್ಟ್ರಾ ಅಂಕಗಳನ್ನು ಜಮಾ ಮಾಡಿಕೊಂಡು ಮುಂದಕ್ಕೆ ಹೋಗುವ ಪುರುಷಾರ್ಥಿ ಆಗಿದ್ದೇನೆ.

14. ನಾನು ಅವಸರ ಸಮಯದಲ್ಲಿ ಸಹಯೋಗಿಯಾಗಿ ನನ್ನ 8 ಪೈಸೆಗಳಿಗೆ 8 ಕೋಟಿಗಳಷ್ಟು ಜಮಾ ಮಾಡಿಕೊಳ್ಳುವ ಪುಣ್ಯಾತ್ಮನಾಗಿದ್ದೇನೆ.